All India Radio: Bangalore
National Bulletin In Kannada
03.01.2026 19.35 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ನವದೆಹಲಿಯ ರಾಯ್ ಪಿಥೋರ ಸಂಕೀರ್ಣದಲ್ಲಿ ಬುದ್ಧ ಅವಶೇಷಗಳ ಅಂತಾರಾಷ್ಟ್ರೀಯ ಪ್ರದರ್ಶನ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ
- ತನ್ನ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕಾ ಹಸ್ತಕ್ಷೇಪ ಬೇಡ; ಸಾರ್ವಭೌಮತ್ವದ ಉಲ್ಲಂಘನೆಗೆ ಪ್ರತಿಕ್ರಿಯಿಸಲು ಸಿದ್ಧ - ಇರಾನ್ ಎಚ್ಚರಿಕೆ
- ಈ ತಿಂಗಳಾಂತ್ಯದೊಳಗೆ ದೇಶದ ಮೊದಲ ವಂದೇ ಭಾರತ್ ಸ್ಲೀಪರ್ ರೈಲಿಗೆ ಚಾಲನೆ - ಸಚಿವ ಅಶ್ವಿನಿ ವೈಷ್ಣವ್
- ನ್ಯೂಜಿಲೆಂಡ್ ವಿರುದ್ಧ ಏಕದಿನ ಸರಣಿಗೆ ಭಾರತ ತಂಡ ಪ್ರಕಟ; ಶುಭ್‌ಮನ್ ಗಿಲ್ ನಾಯಕ, ಶ್ರೇಯಸ್ ಅಯ್ಯರ್ ಉಪನಾಯಕ

***************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದು ನವದೆಹಲಿಯ ರಾಯ್ ಪಿಥೋರಾ ಸಾಂಸ್ಕೃತಿಕ ಸಂಕೀರ್ಣದಲ್ಲಿ ಭಗವಾನ್ ಬುದ್ಧರ ಪವಿತ್ರ ಪಿಪ್ರಹ್ವಾ ಅವಶೇಷಗಳ ಅಂತಾರಾಷ್ಟ್ರೀಯ ಪ್ರದರ್ಶನವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 'ಬೆಳಕು ಮತ್ತು ಕಮಲ: ಎಚ್ಚರಗೊಂಡವನ ಅವಷೇಶಗಳು' ಎಂಬ ಶೀರ್ಷಿಕೆಯಡಿಯಲ್ಲಿ ಈ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಈ ಕ್ಷಣಕ್ಕಾಗಿ ಭಾರತ ೧೨೫ ವರುಷಗಳಿಂದ ಕಾಯುತ್ತಿತ್ತು, ದೇಶದ ಜನರು ಇನ್ನು ಮುಂದೆ ಭಗವಾನ್ ಬುದ್ಧನ ಈ ಅವಶೇಷಗಳ ದರ್ಶನ-ಆಶೀರ್ವಾದ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

ಈ ಅವಶೇಷಗಳನ್ನು ತೆಗೆದುಕೊಂಡು ಹೋಗಿದ್ದವರು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹರಾಜು ಮಾಡಲು ಪ್ರಯತ್ನಿಸುತ್ತಿದ್ದರು. ಆದರೆ ಇವು ಭಾರತದ ಆಧ್ಯಾತ್ಮ ಮತ್ತು ಸಮಾಜದ ಭಾಗವಾಗಿವೆ. ಆದ್ದರಿಂದ ಸರ್ಕಾರ ಈ ಹರಾಜನ್ನು ತಡೆಯಲು ಯತ್ನಿಸಿತು. ಭಾರತ ಈ ಅವಶೇಷಗಳ ಸ್ವಾಭಾವಿಕ ಹಕ್ಕುದಾರ ಮಾತ್ರವಲ್ಲದೆ ಬುದ್ಧ ಸಂಸ್ಕೃತಿಯ ಜೀವಂತ ಮಾದರಿ, ಪರಂಪರೆಯ ಪ್ರತೀಕ ಮತ್ತು ನಾಗರೀಕತೆಯ ಅವಿಭಾಜ್ಯ ಅಂಗ ಎಂದಿದ್ದಾರೆ.

ದೇಶದಾಂತ್ಯದ ಬುದ್ಧವಿಹಾರಗಳನ್ನು ಆಧುನಿಕರಣಗೊಳಿಸಲು ಸರ್ಕಾರ ಬದ್ಧವಾಗಿದೆ. ಜೊತೆಗೆ ಈ ತಾಣಗಳಲ್ಲಿ ಹೊಸ ಕಟ್ಟಡ ಮತ್ತು ಸವಲತ್ತುಗಳನ್ನು ನಿರ್ಮಿಸುತ್ತಿದೆ. ಭಗವಾನ್ ಬುದ್ಧನಿಗೆ ಸಂಬಂಧಿಸಿದ ಅನೇಕ ಅವಶೇಷಗಳು ೧೮೯೮ರಲ್ಲಿ ಪತ್ತೆಯಾಗಿದ್ದವು. ಪುರಾತತ್ವ ಮತ್ತು ಪ್ರಾಚ್ಯ ಇಲಾಖೆಯು ಪಿಪ್ರಾಹ್ವಾ ಸ್ಥಳ ಪುರಾತನ ಕಪಿಲವಸ್ತುವಿನೊಂದಿಗೆ ಸಾಮ್ಯತೆ ಇರುವುದನ್ನು ಗುರುತಿಸಿತ್ತು. ಬುದ್ಧನ ಜ್ಞಾನೋದಯಕ್ಕಿಂತ ಹಿಂದಿನ ಜೀವನವನ್ನು ಕಪಿಲವಸ್ತುವಿನಲ್ಲಿ ಕಳೆದಿದ್ದ ಎಂದು ಹೇಳಲಾಗುತ್ತದೆ.

***************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಳೆ ವಾರಾಣಸಿಯಲ್ಲಿ ನಡೆಯಲಿರುವ ೭೨ನೇ ರಾಷ್ಟ್ರೀಯ ವಾಲಿಬಾಲ್ ಪಂದ್ಯಾವಳಿಯನ್ನು ವರ್ಚುವಲ್ ಮೂಲಕ ಉದ್ಘಾಟಿಸಲಿದ್ದಾರೆ.

ಈ ಪಂದ್ಯಾವಳಿಯಲ್ಲಿ ವಿವಿಧ ರಾಜ್ಯಗಳು ಹಾಗೂ ಸಂಸ್ಥೆಗಳನ್ನು ಪ್ರತಿನಿಧಿಸುವ ೫೮ ತಂಡಗಳಿಂದ ೧ ಸಾವಿರಕ್ಕೂ ಹೆಚ್ಚು ಆಟಗಾರರು ಭಾಗವಹಿಸಲಿದ್ದಾರೆ. ಈ ಪಂದ್ಯಾವಳಿ ಈ ತಿಂಗಳ ೧೧ರವರೆಗೆ ನಡೆಯಲಿದೆ.

ಭಾರತೀಯ ವಾಲಿಬಾಲ್‌ನಲ್ಲಿ ಉನ್ನತ ಮಟ್ಟದ ಸ್ಪರ್ಧೆ, ಕ್ರೀಡಾ ಮನೋಭಾವ ಮತ್ತು ಪ್ರತಿಭೆಯನ್ನು ಪ್ರದರ್ಶಿಸುವುದು ಇದರ ಉದ್ದೇಶವಾಗಿದೆ.

***************

ಇರಾನ್ ತನ್ನ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕದ ಯಾವುದೇ ಹಸ್ತಕ್ಷೇಪವನ್ನು “ಶೀತಲಸಮರ’ ಎಂದು ಪರಿಗಣಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.

ಇರಾನಿನ ಸರ್ಕಾರ ಪ್ರತಿಭಟನಾಕಾರರ ವಿರುದ್ಧ ಬಲ ಪ್ರಯೋಗ ಮಾಡಿದರೆ, ಮಧ್ಯಪ್ರವೇಶಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇತ್ತೀಚೆಗೆ ಬೆದರಿಕೆ ಹಾಕಿದ ಹಿನ್ನೆಲೆಯಲ್ಲೀ ಈ ಎಚ್ಚರಿಕೆ ನೀಡಲಾಗಿದೆ.

ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು, ಟ್ರಂಪ್ ಅವರ ಈ ಬೆದರಿಕೆಯನ್ನು ಅವಿವೇಕ ಮತ್ತು ಅಪಾಯಕಾರಿ ಎಂದು ಕರೆದಿದ್ದು, ಇರಾನ್‌ನ ಸೈನ್ಯವು ತನ್ನ ಸಾರ್ವಭೌಮತ್ವದ ಯಾವುದೇ ಉಲ್ಲಂಘನೆಗೆ ಪ್ರತಿಕ್ರಿಯಿಸಲು ಸಿದ್ಧವಾಗಿದೆ ಎಂದು ಹೇಳಿದ್ದಾರೆ.

***************

ದೇಶದ ಮೊದಲ ವಂದೇ ಭಾರತ್ ಸ್ಲೀಪರ್ ರೈಲನ್ನು ಇಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಪರಿಶೀಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ರೈಲು ರಾತ್ರಿ ಮತ್ತು ದೀರ್ಘ ಪ್ರಯಾಣಕ್ಕಾಗಿ ವಿನ್ಯಾಸಗೊಳಿಸಲಾಗಿದೆ. ಸಂಪೂರ್ಣ ಹವಾನಿಯಂತ್ರಿತ ಸ್ಲೀಪರ್ ಸೇವೆಯನ್ನು ಈ ತಿಂಗಳ ದ್ವಿತೀಯಾರ್ಧದಲ್ಲಿ ಗುವಾಹಟಿ ಮತ್ತು ಕೋಲ್ಕತ್ತಾ ನಡುವೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ಧ್ವನಿ: ಅಶ್ವಿನಿ ವೈಷ್ಣವ್

ಇದು ಭಾರತೀಯ ರೈಲ್ವೆ ಅಡಿಯಲ್ಲಿ ದೀರ್ಘ-ದೂರ ರೈಲು ಪ್ರಯಾಣಗಳಲ್ಲಿ ಪ್ರಮುಖ ನವೀಕರಣವನ್ನು ಸೂಚಿಸುತ್ತದೆ. ವಂದೇ ಭಾರತ್ ಸ್ಲೀಪರ್, ಭಾರತದ ಅರೆ-ಹೈ-ಸ್ಪೀಡ್ ರೈಲಿನ ಮುಂದಿನ ಹಂತವಾಗಿದೆ. ವೇಗದ ಪ್ರಯಾಣ, ಉತ್ತಮ ಸೌಕರ್ಯ ಮತ್ತು ಆಧುನಿಕ ಸುರಕ್ಷತಾ ವ್ಯವಸ್ಥೆಗಳನ್ನು ಭರವಸೆ ನೀಡುತ್ತದೆ ಎಂದು ಅವರು ಹೇಳಿದರು.

***************

ಮಹಿಳಾ ಶಿಕ್ಷಣ ಮತ್ತು ಸಾಮಾಜಿಕ ಸುಧಾರಣೆಗಳ ಪ್ರವರ್ತಕರಾದ ಸಾವಿತ್ರಿಬಾಯಿ ಫುಲೆ ಅವರ ಜನ್ಮ ವಾರ್ಷಿಕೋತ್ಸವದಂದು ಗೃಹ ಸಚಿವ ಅಮಿತ್ ಶಾ ಇಂದು ಅವರಿಗೆ ಗೌರವ ಸಲ್ಲಿಸಿದರು.

ಶಿಕ್ಷಣ ಎಂಬ ಮೂಲಭೂತ ಹಕ್ಕಿನೊಂದಿಗೆ ಮಹಿಳೆಯರನ್ನು ಪ್ರೇರೇಪಿಸಿದ ಸಾವಿತ್ರಿಬಾಯಿ ಫುಲೆ ಮಹಿಳಾ ಸಬಲೀಕರಣಕ್ಕೆ ಹೊಸ ದಿಕ್ಕು ನೀಡಿದರು. ಅವರು ಸಾಮಾಜಿಕ ಅಕ್ರಮಗಳ ವಿರುದ್ಧ ಹೋರಾಟ ನಡೆಸಿ, ದೇಶದ ಮೊದಲ ಬಾಲಕಿಯರ ಶಾಲೆಯನ್ನು ಸ್ಥಾಪಿಸಿದರು ಎಂದು ಸಾಮಾಜಿಕ ಜಾಲತಾಣದಲ್ಲಿ ಅಮಿತ್ ಶಾ ತಿಳಿಸಿದ್ದಾರೆ.

***************

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಗೃಹ ಸಚಿವಾಲಯದ ಸಂಸದೀಯ ಸಮಾಲೋಚನಾ ಸಮಿತಿ ಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ಇಂದು ಭಾಗವಹಿಸಿದ್ದರು.

ಈ ಸಭೆಯು ರಾಷ್ಟ್ರೀಯ ಭದ್ರತೆ, ವಿಪತ್ತು ನಿರ್ವಹಣೆ, ಸೈಬರ್ ಭದ್ರತೆ ಮತ್ತು ಪ್ರಾದೇಶಿಕ ಮೂಲಸೌಕರ್ಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಕೇಂದ್ರೀಕರಿಸಿದ್ದು, ಒಗ್ಗಟ್ಟು, ಸಮನ್ವಯ, ಸಂವಹನ ಮತ್ತು ಸೈಬರ್ ಅಪರಾಧವನ್ನು ಎದುರಿಸುವ ಸಾಮರ್ಥ್ಯವನ್ನು ಒಳಗೊಂಡ ಕಾರ್ಯತಂತ್ರದ ಬಗ್ಗೆ ಗೃಹ ಸಚಿವರು ಒತ್ತಿ ಹೇಳಿದರು.

***************

ಇಂದು ಬೆಳಗಿನ ಜಾವ ವೆನೆಜುಯೆಲಾ ಮೇಲೆ ಅಮೆರಿಕವು ವ್ಯಾಪಕ ದಾಳಿ ನಡೆಸಿದ ಹಿನ್ನೆಲೆಯಲ್ಲಿ, ವೆನೆಜುಯೆಲಾ ಅಧ್ಯಕ್ಷ ನಿಕೊಲಾಸ್ ಮದುರೊ ಹಾಗೂ ಅವರ ಪತ್ನಿಯನ್ನು ಬಂಧಿಸಿ ದೇಶದ ಹೊರಗೆ ಕರೆದೊಯ್ಯಲಾಗಿದೆ ಎಂದು ತಿಳಿದುಬಂದಿದೆ.

ಸಾಮಾಜಿಕ ಜಾಲತಾಣದಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಅಮೆರಿಕವು ವೆನೆಜುಯೆಲಾ ಮತ್ತು ಅದರ ನಾಯಕನ ವಿರುದ್ಧ ಭಾರೀ ಪ್ರಮಾಣದ ದಾಳಿಯನ್ನು ಯಶಸ್ವಿಯಾಗಿ ನಡೆಸಿದೆ ಎಂದು ಹೇಳಿದ್ದಾರೆ. ಈ ಕಾರ್ಯಾಚರಣೆಯನ್ನು ಅಮೆರಿಕದ ಕಾನೂನು ಜಾರಿಗೆ ಸಂಬಂಧಿಸಿದ ಸಂಸ್ಥೆಗಳ ಸಹಕಾರದೊಂದಿಗೆ ನಡೆಸಲಾಗಿದೆ ಎಂದು ಅವರು ಉಲ್ಲೇಖಿಸಿದ್ದಾರೆ. ಇಂದು ಬೆಳಗಿನ ಜಾವ ವೆನೆಜುಯೆಲಾದ ರಾಜಧಾನಿ ಕರಾಕಾಸ್‌ನಲ್ಲಿ ಹಲವು ಭಾರೀ ಸ್ಫೋಟಗಳ ಶಬ್ದ ಕೇಳಿಬಂದಿದೆ.

ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ಸರ್ಕಾರವು ಅತ್ಯಂತ ಗಂಭೀರವಾದ ಸೈನಿಕ ಆಕ್ರಮಣ ನಡೆಸಿದೆ ಎಂದು ಆರೋಪಿಸಿ ವೆನೆಜುಯೆಲಾ ತೀವ್ರವಾಗಿ ಟೀಕಿಸಿದೆ.

***************

ಗಾಜಾದಲ್ಲಿ ಒಂದು ಮಿಲಿಯನ್‌ಗಿಂತಲೂ ಹೆಚ್ಚು ಜನರಿಗೆ ತುರ್ತು ಆಶ್ರಯ ನೆರವು ಅಗತ್ಯವಿದೆ ಎಂದು ವಿಶ್ವಸಂಸ್ಥೆ ಹೇಳಿದೆ.

ಗಾಜಾದಲ್ಲಿ ಮಾನವೀಯ ಸಹಾಯ ಕಾರ್ಯಗಳು ಅತ್ಯಂತ ದುರ್ಬಲ ಕುಟುಂಬಗಳಿಗೆ ನೆರವು ಮುಂದುವರಿದಿದೆ. ಕಠಿಣ ಚಳಿ, ಮಳೆ, ಗಾಳಿ ಮತ್ತು ಸಮುದ್ರದ ಅಲೆಗಳಿಂದ ಹಾನಿಗೊಳಗಾದ ತಾತ್ಕಾಲಿಕ ಗುಡಾರಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಪ್ಯಾಲೆಸ್ಟೀನಿಯರು ತೀವ್ರ ಸಂಕಷ್ಟವನ್ನು ಎದುರಿಸುತ್ತಿದ್ದಾರೆ ಎಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಗಳ ವಕ್ತಾರರು ತಿಳಿಸಿದ್ದಾರೆ.

***************

ಬದಲ್ತಾ ಭಾರತ್ ಮೇರಾ ಅನುಭವ್ ಅಭಿಯಾನದಡಿಯಲ್ಲಿ ನಾಲ್ಕು ಸೃಜನಶೀಲ ಸವಾಲುಗಳ ವಿಜೇತರನ್ನು ವಾರ್ತಾ ಮತ್ತು ಪ್ರಸಾರ ಸಚಿವಾಲಯ ಘೋಷಿಸಿದೆ. ಈ ಸವಾಲುಗಳನ್ನು ಮೈಗೌವ್ ವೇದಿಕೆಯ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು.

ಬದಲ್ತಾ ಭಾರತ್ ಮೇರಾ ಅನುಭವ್ - ಇನ್‌ಸ್ಟಾಗ್ರಾಮ್ ರೀಲ್ ಸ್ಪರ್ಧೆಯ ವಿಭಾಗದಲ್ಲಿ ಇಂದ್ರಜೀತ್ ಸುಬೋಧ್ ಮಶಂಕರ್ ಪ್ರಥಮ ಬಹುಮಾನ ಪಡೆದಿದ್ದಾರೆ, ಬದಲ್ತಾ ಭಾರತ್ ಮೇರಾ ಅನುಭವ್ - ಯೂಟ್ಯೂಬ್ ಶಾರ್ಟ್ಸ್ ಚಾಲೆಂಜ್ ವಿಭಾಗದಲ್ಲಿ ಮಂಥನ್ ರೋಹಿತ್ ಪ್ರಥಮ ಬಹುಮಾನ ಪಡೆದಿದ್ದಾರೆ.

ಸುಶೋವನ್ ಮನ್ನಾ, ಶಾರ್ಟ್ ಎವಿ ಚಾಲೆಂಜ್ - ಸ್ಟೋರಿ ಆಫ್ ನ್ಯೂ ಇಂಡಿಯಾ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ಗೆದ್ದರೆ, ಕೃಷ್ಣ ಗುಪ್ತಾ ಬದಲ್ತಾ ಭಾರತ್ ಮೇರಾ ಅನುಭವ್ - ಬ್ಲಾಗ್ ಬರವಣಿಗೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪಡೆದರು.

***************

ಹೈದರಾಬಾದ್‌ನ ಬೊಲ್ಲಾರಮ್‌ನಲ್ಲಿರುವ ರಾಷ್ಟ್ರಪತಿ ನಿಲಯದ ಮುಖ್ಯ ಹುಲ್ಲುಹಾಸಿನಲ್ಲಿ ಇಂದು ಮಹಿಳಾ ಪ್ರಗತಿಪರ ರೈತರ ಗುಂಪೊಂದು ಎರಡನೇ ಉದ್ಯಾನ ಉತ್ಸವವನ್ನು ಔಪಚಾರಿಕವಾಗಿ ಉದ್ಘಾಟಿಸಿತು. ಸಾರ್ವಜನಿಕ ಭಾಗವಹಿಸುವಿಕೆ ಮತ್ತು ಪರಿಸರ ಜಾಗೃತಿಯನ್ನು ಉತ್ತೇಜಿಸಲು ರಾಷ್ಟ್ರಪತಿ ಭವನವು ಮಾಡುತ್ತಿರುವ ಪ್ರಯತ್ನಗಳ ಭಾಗವಾಗಿ ಉದ್ಯಾನ ಉತ್ಸವವನ್ನು ನಡೆಸಲಾಗುತ್ತಿದೆ.

ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ಮತ್ತು ರಾಷ್ಟ್ರೀಯ ಕೃಷಿ ವಿಸ್ತರಣಾ ನಿರ್ವಹಣಾ ಸಂಸ್ಥೆಯ ಬೆಂಬಲದೊಂದಿಗೆ ರಾಷ್ಟ್ರಪತಿ ನಿಲಯವು ಆಯೋಜಿಸಿರುವ ಉದ್ಯಾನ ಉತ್ಸವ ಸುಮಾರು ೧೨೦ ಪ್ರದರ್ಶಕರೊಂದಿಗೆ ಸುಮಾರು ೫೦ ವಿಷಯಾಧಾರಿತ ಮಳಿಗೆಗಳನ್ನು ಒಳಗೊಂಡಿತ್ತು.

***************

ಭಾರತದ ಮೊದಲ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ವೇಲು ನಾಚಿಯಾರ್ ಅವರ ಜನ್ಮ ವಾರ್ಷಿಕೋತ್ಸವದಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಗೌರವ ಸಲ್ಲಿಸಿದರು.

ವೀರಮಂಗೈ ರಾಣಿ ವೇಲು ನಾಚಿಯಾರ್ ಒಬ್ಬ ಧೈರ್ಯಶಾಲಿ ಆಡಳಿತಗಾರ್ತಿ ಮತ್ತು ದೂರದೃಷ್ಟಿಯ ನಾಯಕಿ, ವಸಾಹತುಶಾಹಿ ಪ್ರಾಬಲ್ಯದ ವಿರುದ್ಧ ದೃಢವಾಗಿ ನಿಂತರು, ಶೌರ್ಯ, ಕಾರ್ಯತಂತ್ರದ ಚಾತುರ್ಯ ಮತ್ತು ಅಸಾಧಾರಣ ನಾಯಕತ್ವವನ್ನು ಪ್ರದರ್ಶಿಸಿದರು ಎಂದು ರಾಧಾಕೃಷ್ಣನ್ ಸಾಮಾಜಿಕ ಜಾಲತಾಣದಲ್ಲಿ ಹೇಳಿದ್ದಾರೆ.

***************

ವೆಲ್ಲೂರಿನ ಪ್ರಧಾನ ಅರ್ಚಕ ಶಕ್ತಿ ಅಮ್ಮ ಅವರ ೫೦ನೇ ಹುಟ್ಟುಹಬ್ಬದ ಅಂಗವಾಗಿ ವೆಲ್ಲೂರಿನ ಸ್ವರ್ಣ ದೇವಾಲಯಕ್ಕೆ ಇಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಭೇಟಿ ನೀಡಿದರು.

ಈ ದೇವಾಲಯವು ಬಹಳ ವಿಶೇಷವಾಗಿದೆ ಮತ್ತು ದೇಶದ ಎರಡು ಸುವರ್ಣ ದೇವಾಲಯಗಳಲ್ಲಿ ಒಂದಾಗಿದ್ದು, ಈ ಆವರಣವು ಪೂಜಾ ಸ್ಥಳ ಮಾತ್ರವಲ್ಲದೆ ಜನರಿಗೆ ಸೇವೆ ಸಲ್ಲಿಸುವ ಸ್ಥಳವಾಗಿದೆ. ಸಮಾಜದ ಪ್ರಯೋಜನಕ್ಕಾಗಿ ಸಮಾಜ ಕಲ್ಯಾಣ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಕ್ಕಾಗಿ ದೇವಾಲಯ ಆಡಳಿತವನ್ನು ರಾಧಾಕೃಷ್ಣನ್ ಶ್ಲಾಘಿಸಿದರು.

***************

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಇಂದು ದೆಹಲಿ ವಿಧಾನಸಭೆಯಲ್ಲಿ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಮತ್ತು ಪಂಡಿತ್ ಮದನ್ ಮೋಹನ್ ಮಾಳವೀಯ ಅವರ ಭಾವಚಿತ್ರಗಳನ್ನು ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ, ದೆಹಲಿ ವಿಧಾನಸಭಾ ಸ್ಪೀಕರ್ ವಿಜೇಂದರ್ ಗುಪ್ತಾ ಅವರ ಸಮ್ಮುಖದಲ್ಲಿ ರಾಜನಾಥ್ ಸಿಂಗ್ ಅವರು ಭಾರತ್ ಮಾತಾ ಎಂಬ ಕಾಫಿ ಟೇಬಲ್ ಪುಸ್ತಕವನ್ನು ಬಿಡುಗಡೆ ಮಾಡಿದರು.

***************

ಜನವರಿ ೧೧ ರಿಂದ ಆರಂಭವಾಗಲಿರುವ ನ್ಯೂಜಿಲೆಂಡ್ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಗೆ ಭಾರತ ತಂಡವನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ-ಬಿಸಿಸಿಐ ಇಂದು ಪ್ರಕಟಿಸಿದೆ.

ಶುಭಮನ್ ಗಿಲ್ ಅವರನ್ನು ನಾಯಕನನ್ನಾಗಿ ಮತ್ತು ಶ್ರೇಯಸ್ ಅಯ್ಯರ್ ಅವರನ್ನು ಉಪನಾಯಕನನ್ನಾಗಿ ಆಯ್ಕೆ ಮಾಡಲಾಗಿದ್ದು, ಕಳೆದ ವರ್ಷದ ಆಸ್ಟ್ರೇಲಿಯಾ ಪ್ರವಾಸದ ವೇಳೆ ಗಾಯದ ನಂತರ ಶ್ರೇಯಸ್ ಅಯ್ಯರ್ ತಂಡಕ್ಕೆ ಮರಳಿದ್ದಾರೆ.

ಮುಂಬರುವ ಟಿ೨೦ಐ ಮತ್ತು ಟಿ೨೦ ವಿಶ್ವಕಪ್‌ಗೆ ಇಶಾನ್ ಕಿಶನ್ ಅವರನ್ನು ಆಯ್ಕೆ ಮಾಡಿದ್ದರೂ ರಿಷಭ್ ಪಂತ್ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಕೂಡ ಸೇರಿದ್ದಾರೆ.

***************

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ-ಬಿಸಿಸಿಐ ೨೦೨೬ರ ಐಪಿಎಲ್ ಆವೃತ್ತಿಗೂ ಮುನ್ನ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದಿಂದ ಬಾಂಗ್ಲಾದೇಶದ ವೇಗದ ಬೌಲರ್ ಮುಸ್ತಫಿಜುರ್ ರಹಮಾನ್ ಅವರನ್ನು ಬಿಡುಗಡೆ ಮಾಡಲು ಸೂಚಿಸಿದೆ.

*******ಮುಕ್ತಾಯ*******